


ಸ್ನೇಹಿತರು ಯಾರೆನ್ನುವುದರ ಮೇಲೆ ನಮ್ಮ ಗುಣವನ್ನು ಅಳೆಯುವ ಕಾಲವೊಂದಿತ್ತು. ಈಗ ಸಾಮಾಜಿಕ ಜಾಲತಾಣಗಳಲ್ಲಿನ ನಮ್ಮ ಕ್ರಿಯೆ–ಪ್ರತಿಕ್ರಿಯೆಗಳ ಮೇಲೆ ವ್ಯಕ್ತಿತ್ವವನ್ನು ಅಳೆಯುವ ಕಾಲ.

ಇತ್ತೀಚೆಗೆ ಕಂಪನಿಯೊಂದರ ಎಚ್‌ಆರ್ ಪೋಸ್ಟ್‌ಗೆ ಕಾಲ್ ಮಾಡಿದ್ದರು. ಉದ್ಯೋಗಾವಕಾಶಗಳು ಮರೀಚಿಕೆಯಂತಾಗಿರುವ ಈ ಸಂದರ್ಭದಲ್ಲಿ ಅರ್ಜಿ ಆಹ್ವಾನ ಮಾಡಿದ ಪ್ರಕಟಣೆ ನೋಡಿ ನೂರಾರು ಅರ್ಜಿಗಳು ಬಂದಿದ್ದವು. ಅರ್ಜಿಗಳನ್ನು ಶಾರ್ಟ್‌ಲಿಸ್ಟ್ ಮಾಡಿದ ಆಯ್ಕೆಸಮಿತಿ ಸದಸ್ಯರು, ಸುಮಾರು 12 ಅರ್ಜಿಗಳನ್ನು ಅಂತಿಮಗೊಳಿಸಿ ಕಂಪನಿಯ ನಿರ್ದೇಶಕರ ಮುಂದಿಟ್ಟರು. ನಿರ್ದೇಶಕರು ಆ ಅರ್ಜಿಗಳನ್ನು ಗಮನಿಸಿ, ಐಟಿ ಭಾಗದ ಇಬ್ಬರು ಸದಸ್ಯರನ್ನು ಕರೆದು, ಅವರಿಗೆ ಹಸ್ತಾಂತರಿಸಿದರು.

ಆ ಅಭ್ಯರ್ಥಿಗಳ ಆನ್‌ಲೈನ್ ಪ್ರೊಫೈಲ್ ಹೇಗಿದೆ ಎಂದು ಗಮನಿಸಿ ಷರಾ ಬರೆಯಬೇಕು ಎಂದು ಐಟಿ ವಿಭಾಗದವರಿಗೆ ಸೂಚನೆ ನೀಡಲಾಯಿತು.

ಸಾಮಾಜಿಕ ಜಾಲತಾಣದಲ್ಲಿ ‘ಗುಡ್ ಬಿಹೇವಿಯರ್’ ಅಥವಾ ಒಳ್ಳೆಯ ವರ್ತನೆ ಎನ್ನುವುದು ಎಲ್ಲರೂ ಗಮನಿಸುವ ಸಂಗತಿ. ಉದ್ಯೋಗಕ್ಕೆ ಆಯ್ಕೆ ಆಗುವ ಸಂದರ್ಭದಲ್ಲಿ ಮಾತ್ರವಲ್ಲ, ಎಲ್ಲ ಸಂದರ್ಭಗಳಲ್ಲಿಯೂ ಸಾಮಾಜಿಕ ಜಾಲತಾಣದಲ್ಲಿ ವ್ಯಕ್ತಿಯ ಪ್ರೊಫೈಲ್ ವೀಕ್ಷಿಸುವುದು ಒಂದು ವಾಡಿಕೆಯೇ ಆಗಿದೆ.

ಸಿದ್ಧಾಂತ್‌ಗೆ ರಾಜಕೀಯದಲ್ಲಿ ತುಂಬಾ ಆಸಕ್ತಿ. ಬೆಳಿಗ್ಗೆ ಪತ್ರಿಕೆಗಳನ್ನು ಓದುತ್ತ, ಬಳಿಕ ಆನ್‌ಲೈನ್‌ನಲ್ಲಿ ಸದಾ ನ್ಯೂಸ್ ಕ್ಲಿಪ್‌ಗಳನ್ನು ನೋಡುತ್ತ ಸದಾ ಅಪ್‌ಡೇಟ್ ಆಗಿಯೇ ಇರುತ್ತಿದ್ದ. ತಾನು ಮತ ಹಾಕಿದ, ಅಧಿಕಾರವನ್ನೂ ಪಡೆದ ಪಕ್ಷ ತನ್ನ ನಿರೀಕ್ಷೆಗೆ ತಕ್ಕಂತೆ ವರ್ತಿಸದೇ ಇದ್ದಾಗ ಸಿಡಿಮಿಡಿಗೊಳ್ಳುತ್ತಿದ್ದ. ಫೇಸ್‌ಬುಕ್‌ನಲ್ಲಿ ಈ ಬಗ್ಗೆ ನಡೆಯುತ್ತಿದ್ದ ಜಟಾಪಟಿ, ವಾಗ್ವಾದಗಳಲ್ಲಿ ಅವನು ಖಾರವಾಗಿ ಕಮೆಂಟ್‌ಗಳನ್ನು ಒಗೆಯುತ್ತಿದ್ದ. ಹೀಗೆ ‘ಕಡಕ್ ಕಮೆಂಟ್‌ರಾಜ’ ಎಂದೇ ಕುಖ್ಯಾತಿ ಪಡೆಯುತ್ತ ಹೋದ ಸಿದ್ಧಾಂತ್ ವ್ಯಕ್ತಿತ್ವ ಸುತ್ತಮುತ್ತಲಿನವರ ಕಣ್ಣಲ್ಲಿ ಸೀಮಿತವಾಗಿಯೇ ಉಳಿಯಿತು. ಪಂಚಾಯಿತಿ ಮಟ್ಟದಿಂದ ಹಿಡಿದು, ಕೇಂದ್ರದವರೆಗಿನ ರಾಜಕೀಯದ ಆಗುಹೋಗುಗಳನ್ನೆಲ್ಲ ಸಿದ್ಧಾಂತ್ ಅರಿತವನಾಗಿದ್ದ. ಆದರೆ ಅವನ ಅರಿವನ್ನು ಮೀರಿ ಪ್ರತಿಕ್ರಿಯೆಗಳೇ ಜಾಸ್ತಿಯಾಗಿ ವ್ಯಕ್ತವಾದುದರಿಂದ ಅವನು ಕಡಕ್ ಕಮೆಂಟ್‌ರಾಜ ಎಂಬ ಹಣೆಪಟ್ಟಿಗೆ ಸೀಮಿತವಾಗಿಬಿಟ್ಟ.

ಒಂದು ದಿನ ಅವನ ಬಾಸ್ ಚೇಂಬರ್‌ಗೆ ಕರೆದು ಲೋಕಾಭಿರಾಮವಾಗಿ ಮಾತನಾಡಿದರು. ‘ಕಂಪನಿಯೊಂದು ಒಂದಲ್ಲ ಒಂದು ಕಾರಣಕ್ಕೆ ಆಳುವ ಪಕ್ಷದ ಜೊತೆಗೋ, ವಿರೋಧ ಪಕ್ಷದ ಜೊತೆಗೋ ಗುರುತಿಸಿಕೊಂಡಿರುತ್ತದೆ. ಆದ್ದರಿಂದ ಪ್ರತಿಕ್ರಿಯೆಗಳನ್ನು ಟೈಪ್ ಮಾಡುವ ಸಂದರ್ಭದಲ್ಲಿ, ನೀವು ಕೆಲಸ ಮಾಡುವ ಕಂಪನಿಯ ನಿಲುವು ಕೂಡ ಗಮನದಲ್ಲಿರಲಿ’ ಎಂಬುದು ಅವರ ಸಂಭಾಷಣೆಯ ಒಟ್ಟು ತಾತ್ಪರ್ಯವಾಗಿತ್ತು.

ಹಿಂದಿನ ಕಾಲದಲ್ಲಿ ಒಂದು ಊರಿನಲ್ಲಿ ಒಬ್ಬ ವ್ಯಕ್ತಿಗೆ ಒಳ್ಳೆಯ ಹೆಸರಿದೆಯಾ? ಎಂದು ಅವರಿವರ ಬಳಿ ವಿಚಾರಿಸಿ ತಿಳಿಯುವುದು ವಾಡಿಕೆಯಾಗಿತ್ತು. ಇಂದು ಹಾಗಲ್ಲ. ತನ್ನೂರಿನಲ್ಲಿ ಒಬ್ಬ ವ್ಯಕ್ತಿ ಎಷ್ಟೇ ಸುಭಗನಾಗಿರಬಹುದು. ಆತನ ಆನ್‌ಲೈನ್ ಜಾತಕವೂ ಅಷ್ಟೇ ಮುಖ್ಯ. ಹಾಗೆಂದು ಇದೇನೋ, ಸೈಬರ್ ಭಾಗದಿಂದ ನಡೆಸುವ ತನಿಖೆಯೇನೂ ಅಲ್ಲ. ಅಭ್ಯರ್ಥಿಯು ತನ್ನ ಟ್ವಿಟ್ಟರ್ ಅಕೌಂಟ್‌ನಲ್ಲಿ ಯಾರನ್ನೆಲ್ಲ ಫಾಲೋ ಮಾಡುತ್ತಾನೆ. ಫೇಸ್‌ಬುಕ್‌ನ ಗೋಡೆಯ ಮೇಲೆ ಏನೆಲ್ಲ ಕರಾಮತ್ತು ನಡೆಸಿದ್ದಾನೆ, ಇನ್‌ಸ್ಟಾಗ್ರಾಂನಲ್ಲಿ ಅವನ ಪ್ರೊಫೈಲ್ ಹೆಸರೇನು ಎಂಬೆಲ್ಲ ವಿಚಾರಗಳನ್ನು ಗಮನಿಸುವುದು, ಆ ಮೂಲಕ ಅವನ ಸ್ವಭಾವ ಹೇಗಿರಬಹುದು ಎಂದು ಗ್ರಹಿಸುವುದು ಸಾಮಾನ್ಯ. ಉದ್ಯೋಗಕ್ಕೆ ನೇಮಕ ಮಾಡುವಾಗ, ಇದು ಆಯ್ಕೆ ಪ್ರಕ್ರಿಯೆಯ ಭಾಗವೇ ಆಗಿದೆ.

ಸಿದ್ಧಾಂತ್ ಮೊದಲು ಹೀಗಿರಲಿಲ್ಲ. ಅವನ



ಸಾಮಾಜಿಕ ಜಾಲತಾಣಗಳ ಗೋಡೆ ಮೇಲಿನ ಅಶುಚಿತ್ವಕ್ಕೆ ಮೂಲ ಕಾರಣ ಸಿಟ್ಟು. ಸಿಟ್ಟು ಸಾತ್ವಿಕವಾಗಿದ್ದಲ್ಲಿ ಅದು ಸಮಾಜದಲ್ಲಿ ಒಳ್ಳೆಯ ಬದಲಾವಣೆ ತರಬಲ್ಲದು.